**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ , ಉಡುಪಿ ಜಿಲ್ಲೆ , ಉಡುಪಿ**

ಸೆಷನ್ಸ್ ಕೇಸ್ ನಂಃ 3/2021 ಪಿ.ಡಬ್ಲ್ಯೂಃ 7

ಸಿ.ಡಬ್ಲ್ಯೂಃ 13

| | |
|---|---|
| ಸಾಕ್ಷಿದಾರರ ಹೆಸರು | ಹಮ್ಜ ಅಬ್ದುಲ್ ಬ್ಯಾರಿ |
| ತಂದೆಯ ಹೆಸರು | ಬ್ಯಾರಿ ಅಬ್ದುಲ್ |
| ವಯಸ್ಸು | 49 ವರ್ಷ |
| ಉದ್ಯೋಗ | ಚಾಲಕ |
| ವಿಳಾಸ | ಎಸ್.ಎಸ್. ರೋಡ್, ಹೆಜಮಾಡಿ |

ದಿನಾಂಕಃ 27-10-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1) ನನಗೆ ನ್ಯಾಯಾಲಯದ ಮುಂದೆ ಇರುವ ಆರೋಪಿತರ ಪರಿಚಯ ಇದೆ. ನಾನು ಅವರನ್ನು ಠಾಣೆಯಲ್ಲಿ ನೋಡಿದಾಗ ಗೊತ್ತು. ಆರೋಪಿತರನ್ನು 4 – 5 ವರ್ಷಗಳ ಹಿಂದೆ ಠಾಣೆಯಲ್ಲಿ ನೋಡಿದ್ದೆ. ಆದಿನ ನನ್ನೊಂದಿಗೆ ಪೊಲೀಸರು ಚಾಸಾ-1 ಮತ್ತು 5 ಇವರನ್ನು ಕರೆಯಿಸಿದ್ದರು. ಆಗ 1 ಮತ್ತು 2 ನೇ ಆರೋಪಿತರು ಠಾಣೆಯ ಬಳಿ ಬಂದಿದ್ದರು. ಅವರನ್ನು ವಿಚಾರಣೆಗಾಗಿ ಕೂರಿಸಿದ್ದರು. ಆದಿನ ನನ್ನ ಸಮಕ್ಷಮ ಏನು ಮಾಡಿಲ್ಲ. ನನ್ನ ಸಹಿ ಪಡೆದಿದ್ದರು. ಯಾವ ಕಾರಣಕ್ಕೆ ಸಹಿ ಪಡೆದಿದ್ದರು ಎಂದು ಹೇಳಿಲ್ಲ. ನನ್ನ ಸಹಿಯನ್ನು ನೋಡಿದರೆ ಗುರುತಿಸಬಲ್ಲೆ. ಸದರಿ ಪಂಚನಾಮೆಯನ್ನು ಈಗ ನೋಡಿ, ಪಂಚನಾಮೆಯಲ್ಲಿರುವ ಸಹಿ ನನ್ನದೇ ಇದೆ. ಸದರಿ ಪಂಚನಾಮೆಯನ್ನು **ನಿಶಾನೆ ಪಿ-8** ಎಂದು, ನನ್ನ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಿದ್ದೇನೆ. ಆದಿನ ನನ್ನೊಂದಿಗೆ ಚಾಸಾ-14 ಸಹಿ ಮಾಡಿದ್ದರು. ಪೊಲೀಸರು ಆರೋಪಿತರನ್ನು ಕೊಲೆಗೆ ಸಂಬಂಧಿಸಿದಂತೆ ವಿಚಾರಿಸಲು ಕರೆತಂದಿದ್ದರು ಎಂದು ಗೊತ್ತು. ಅರೋಪಿತರಿಂದ ಪೊಲೀಸರು ಏನು ಜಪ್ತು ಮಾಡಿದ್ದರು ಎಂದುಗೊತ್ತಿಲ್ಲ. ನಿಪಿ-8 ಕ್ಕೆ ಯಾವ ಕಾರಣಕ್ಕೆ ಸಹಿ ಮಾಡಿದ್ದೇನೆ ಎಂದು ಗೊತ್ತಿಲ್ಲ.

**( ಈ ಹಂತದಲ್ಲಿ ಅಭಿಯೋಜಕರ ವಿನಂತಿಯ ಮೇರೆಗೆ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿಸವಾಲು ಮಾಡಲು ಅಭಿಯೋಜಕರಿಗೆ ಅನುಮತಿ ಕೊಡಲಾಯಿತು)**

**ಪಾಟಿಸವಾಲು: ಸರಕಾರಿ ಅಭಿಯೋಜಕರಿಂದ:**

1) ನ್ಯಾಯಾಲಯದ ಮುಂದೆ ಇರುವ 1 ನೇ ಆರೋಪಿ ಮೃತ ಸದಾಕತ್ ಅನ್ಸಾರಿ, ಮತ್ತು 2 ನೇ ಆರೋಪಿ ಮೃತನ ತಮ್ಮನೆಂದು ಗೊತ್ತಿಲ್ಲ. ತಾರೀಕು 23-05-2020 ರಂದು ಪೊಲೀಸರು ನನ್ನನ್ನು ಮತ್ತು ಚಾಸಾ-14 ಈತನ ಸಮಕ್ಷಮ ಸಂಜೆಯ 5.30 ರಿಂದ 6.30 ಗಂಟೆಯ ಸಮಯದಲ್ಲಿ ಆರೋಪಿತರನ್ನು ದಸ್ತಗಿರಿ ಮಾಡಿದ್ದರು ಎಂದರೆ ಸರಿಯಲ್ಲ. ಆಗ ವಿಚಾರಿಸಿದಾಗ, ಆರೋಪಿತರು ಸದಕಾತ್ ಅನ್ಸಾರಿಯ ಸಾವಿನ ಬಗ್ಗೆ ಮಾಹಿತಿ ನೀಡಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಪೊಲೀಸರು ಎರಡು ಮೊಬೈಲ್ ಗಳನ್ನು ಜಪ್ತು ಮಾಡಿದ್ದರು ಎಂದರೆ ಸರಿಯಲ್ಲ. ಅದಕ್ಕಾಗಿ ಬರೆದ ಪಂಚನಾಮೆಗೆ ನಾನು ಸಹ ಅಲ್ಲಿಯೇ ಸಹಿ ಮಾಡಿದ್ದೆ ಎಂದರೆ ಸರಿಯಲ್ಲ. ಅದು ನಿಪಿ-8 ರ ಪಂಚನಾಮೆ ಎಂದರೆ ಸರಿಯಲ್ಲ. ನನಗೆ ನಿಪಿ-8 ರ ಬಗ್ಗೆ ಮಾಹಿತಿ ಇದ್ದರೂ ಸಹ ಈಗ ಆರೋಪಿತರಿಗೆ ಸಹಾಯ ಮಾಡಲು ಈ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲು: ಶ್ರೀ ಪಿ.ಪಿ.ಜೆ ವಕೀಲರಿಂದ ಆರೋಪಿತರ ಪರವಾಗಿ ಇಲ್ಲ ಎಂದು ಸಲ್ಲಿಸಿದ್ದಾರೆ**

**ಮರು ವಿಚಾರಣೆ - ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

(ಕೆ.ಎಸ್. ಗಂಗಣ್ಣವರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ